2477 (3367) ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು 3 ವರ್ಷಗಳಲ್ಲಿ ವಿವಿಧ ಕಾಮಗಾರಿಗಳಿಗೆ ವೆಚ್ಚ ಮಾಡಿದ ಹಣದ ಮೊತ್ತವೆಷ್ಟು;

ಆ) ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಕೈಗೆತ್ತಿ ಕೊಳ್ಳಲಾಗಿರುವ ವಿವಿಧ ಕಾಮಗಾರಿ ಕೆಲಸಗಳಾವುವು; ಪ್ರತಿಯೊಂದಕ್ಕೂ ವೆಚ್ಚವಾಗಿರುವ ಹಣದ ಮೊತ್ತವೆಷ್ಟು;

ಇ) ಒಂದೇ ಕೆಲಸಕ್ಕೆ ಬೇರೆ ಬೇರೆ ಶೀರ್ಷಿಕೆಯಡಿಯಲ್ಲಿ ಹಣ ವ್ಯಯಮಾಡಿರುವುದು ನಿಜವಲ್ಲವೇ;

ಈ) ಹಾಗಿದ್ದರೆ, ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ;

ಉ) ಕುಷ್ಟಗಿ ಮತ್ತು ಲಿಂಗಸುಗೂರು ತಾಲ್ಲೂಕು ಪಂಚಾಯತ್ ಕಛೇರಿ ವ್ಯಾಪ್ತಿಯಲ್ಲಿ ಒಟ್ಟಾರೆ 5 ವರ್ಷಗಳಿಗಿಂತಲೂ ಹೆಚ್ಚು ಸೇವೆ ಸಲ್ಲಿಸುತ್ತಿರುವ ಅಧಿಕಾರಿ ನೌಕರರುಗಳ ಸಂಖ್ಯೆ ಎಷ್ಟು;

ಊ) ಅವರುಗಳನ್ನು ಅಲ್ಲಿಯೇ ಮುಂದುವರಿಸುವುದಕ್ಕೆ ಕಾರಣಗಳೇನು; ಪೂರ್ಣ ವಿವರ ನೀಡುವುದು?

ಶ್ರೀ ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) –

ಅ) ವಿವರಗಳು ಈ ಕೆಳಕಂಡಂತಿರುತ್ತವೆ. (ರೂ. ಕೋಟಿಗಳಲ್ಲಿ)

ವರ್ಷ	ವೆಚ್ಚ
2001–02	1596.59
2002–03	1553.24
2003–04	1903.94

ಆ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಇ) ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು;

ಒಂದೇ ಕೆಲಸವನ್ನು ಬೇರೆ ಬೇರೆ ಶೀರ್ಷಿಕೆಗಳಲ್ಲಿ ತೆಗೆದುಕೊಳ್ಳಬೇಕಾಗುವ ಪ್ರಸಂಗ ಒಂದೊಂದು ಸಲ ಬರುತ್ತದೆ. ಏಕೆಂದರೆ ಮೊದಲು ಒಂದು ಶೀರ್ಷಿಕೆಯಲ್ಲಿ ತೆಗೆದುಕೊಂಡ ಕಾಮಗಾರಿಯು ನಿರ್ದಿಷ್ಟ ಪಡಿಸಿದ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಆಗುವ ಸಂಭವ ಬಂದಲ್ಲಿ ಆ ಹೆಚ್ಚಿನ ಕಾಮಗಾರಿಗಾಗಿ ಇನ್ನೊಂದು ಲಭ್ಯವಿರುವ ಅನುದಾನ ಶೀರ್ಷಿಕೆಯಲ್ಲಿ ತೆಗೆದುಕೊಂಡು ಅನುಮತಿ ಪಡೆದು ಕಾಮಗಾರಿಯನ್ನು ಪೂರ್ಣ ಗೊಳಿಸಲಾಗುವುದು. ಅನುಮತಿ ಪಡೆಯದೇ ಬೇರೆ ಬೇರೆ ಶೀರ್ಷಿಕೆಯಲ್ಲಿ ಒಂದೇ ಕೆಲಸವನ್ನು ತೆಗೆದುಕೊಳ್ಳಲಾಗುವುದಿಲ್ಲ.

ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು;

ಒಂದೇ ಕೆಲಸಕ್ಕೆ ಬೇರೆ ಬೇರೆ ಶೀರ್ಷಿಕೆಯಡಿಯಲ್ಲಿ ಹಣ ವ್ಯಯ ಮಾಡಿರುವುದಿಲ್ಲ.

ಈ) ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು: ಅಂಥ ಯಾವುದೇ ಪ್ರಸಂಗ ಬಂದಿರುವುದಿಲ್ಲ. ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು; ಅಂಥ ಯಾವುದೇ ಪ್ರಸಂಗ ಬಂದಿರುವುದಿಲ್ಲ.

ಉ) ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು; 5 ವರ್ಷಕ್ಕಿಂತ ಹೆಚ್ಚಿಗೆ ಸೇವೆ ಸಲ್ಲಿಸಿದ ವಿವಿಧ ವೃಂದಗಳಲ್ಲಿ 29 ಸಿಬ್ಬಂದಿಗಳು ಇರುವರು. ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು;

ಅಧಿಕಾರಿಗಳು ಯಾರೂ 5 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದವರು ಇಲ್ಲ. ಇತರ ಅಂದರೆ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆಸಹಾಯಕರು, ವಾಹನ ಚಾಲಕ, ಗ್ರೂಪ್ ಡಿ ಸೇರಿದ ಒಟ್ಟು 28 ನೌಕರರು 5 ವರ್ಷಗಳಿಗಿಂತ ಹೆಚ್ಚಿನ ಸೇವೆಯನ್ನು ತಾಲೂಕಾ ಪಂಚಾಯತ್ ಲಿಂಗಸುಗೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಊ) ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು; ಆಡಳಿತಾತ್ಮಕ ದೃಷ್ಟಿಯಲ್ಲಿ ಮುಂದುವರೆದಿದ್ದಾರೆ. ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು; ಅವರುಗಳು ಸ್ವಾಭಾವಿಕವಾಗಿ ಅಲ್ಲಿಯೇ ಮುಂದುವರೆದಿದ್ದಾರೆ, ವಿಶೇಷ ಕಾರಣಗಳು ಇರುವುದಿಲ್ಲ;

571 ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?